**ಕ್ರಿಮಿಸ್. ನಂ. 1/2022**
**ಪಿ.ಡಬ್ಲ್ಯೂಃ 1**

**(ಇಂದು ದಿಃ ದಿಃ 01/04/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಎದುರುದಾರನ ಪರ ಶ್ರೀ ಎಸ್.ಇ.ಹೆಚ್. ವಕೀಲರಿಂದ,**

ಎದುದುರಾರೊಂದಿಗೆ ಮದುವೆಯ ಆಗುವ ಪೂರ್ವದಲ್ಲಿ ನನ್ನ ಮದುವೆಯ ಅಬು ಅಹ್ಮದ್ ಅವರೊಂದಿಗೆ 13 ವರ್ಷಗಳ ಹಿಂದೆ ಆಗಿತ್ತು. ಹಾಗೂ 1 ವಾರದಲ್ಲಿಯೇ ವಿಚ್ಛೆದನ ಆಗಿತ್ತು. ವಿಚ್ಛೆದನ ಭಟ್ಕಳನ ಜಮಾತಿನಲ್ಲಿ ಆಗಿತ್ತು. ಸದರಿ ವಿಚ್ಛೆದನ ದಾಖಲೆಯು ಜಮಾತಿನಲ್ಲಿ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮೊದಲನೇಯ ಗಂಡನಿಗೆ ನನ್ನ ಮೇಲೆ ಮನಸ್ಸು ಇರಲಿಲ್ಲ ಆ ಕಾರಣ ವಿಚ್ಛೆದನ ಆಗಿತ್ತು. ನಾನು ಕಿರುಕುಳ ಸ್ವಭಾವದವಳು ಇದ್ದ ಕಾರಣ ವಿಚ್ಛೆದನ ಆಗಿದೆ ಎಂದರೆ ಸರಿಯಲ್ಲ. ಎದುರುದಾರರೊಂದಿಗೆ ನನ್ನ ಮದುವೆಯ ಕಾರವಾರದಲ್ಲಿ ಎದುರುದಾರನ ಮನೆಯ ಮುಂದೆ ದಿನಾಂಕ 10.06.2020 ರಂದು ಆಗಿತ್ತು. ಮೊದಲನೇಯ ಮದುವೆಯ ಬಗ್ಗೆ ನಾನು ಎದುರುದಾರರಿಗೆ ಹಾಗೂ ಅವರ ಕುಟುಂಬಕ್ಕೆ ಹೇಳದೆ ಮದುವೆ ಮಾಡಿಕೊಂಡಿದೇನೆ ಎಂದರೆ ಸರಿಯಲ್ಲ. ಮೊಲನೆಯ ಮದುವೆಯ ಕಾನೂನಿನ ಪ್ರಕಾರ ವಿಚ್ಛೆದನೆಗೊಂಡಿಲ್ಲ ಎಂದರೆ ಸರಿಯಲ್ಲ. ದಿ.25.04.2020 ರಂದು ಎದುರುದಾರರು ರೂ.3 ಲಕ್ಷ ವರದಕ್ಷಿಣೆ ಹಾಗೂ ಮನೆಯ ಇತರೆ ವಸ್ತುಗಳನ್ನು ಕೇಳಿದ್ದರು ಆದರೆ ನಾವು ಕೊಟ್ಟಿಲ್ಲ. ದಿ.25.04.2020 ರಂದು ಎದುರುದಾರರು ರೂ.3 ಲಕ್ಷ ವರದಕ್ಷಿಣೆ ಹಾಗೂ ಮನೆಯ ಇತರೆ ವಸ್ತುಗಳನ್ನು ಕೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದೂವರೆ ವರ್ಷ ನಾನು ಮದುವೆಯಾದ ನಂತರ ಎದುರುದಾರರ ಮನೆಯಲ್ಲಿ ಇದ್ದೆ. ಎದುರುದಾರರ ಮನೆಯಲ್ಲಿ ತಂದೆ, ತಾಯಿ , ಅಕ್ಕ ಹಾಗೂ ತಂಗಿ ವಾಸವಾಗಿದ್ದಾರೆ. ಎದುರುದಾರರ ಎರಡು ಜನ ಅಕ್ಕಂದಿರ ಮದುವೆ ಆಗಿದ್ದಾರೆ. ಮದುವೆಯ ಕಾಲಕ್ಕೆ ಎದುರುದಾರರ ಅಕ್ಕ ಜಾಬ್ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರರ ಅಕ್ಕಂದಿರ ಗಂಡನ ಮನೆಯು ಹೊನ್ನಾವರ ಹಾಗೂ ಶಿರಸಿ ಆಗಿದೆ. ಹೊನ್ನಾವರದಲ್ಲಿರುವ ಅಕ್ಕನ ಗಂಡ ಬ್ಯಾಂಕಿನಲ್ಲಿ ಉದ್ಯೋಗ ಮಾಡುತ್ತಾರೆ. ಎದುರುದಾರರ ಇಬ್ಬರೂ ಅಕ್ಕಂದಿರು ಯಾವತ್ತು ಎದುರುದಾರರ ಮನೆಯಲ್ಲಿ ವಾಸ ಆಗಿಲ್ಲ ಎಂದರೆ ಸರಿಯಲ್ಲ. ಎದುರುದಾರರ ತಾಯಿಯು ನನಗೆ ಗರ್ಭಪಾತ ಆಗಲು ಕಷಾಯಿಯನ್ನು ಯಾವ ದಿನಾಂಕಕ್ಕೆ ನೀಡಿದ್ದರು ಎಂದರೆ ನನಗೆ ನೆನಪಿಲ್ಲ. ಭಟ್ಕಳದ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಎದುರುದಾರರ ತಾಯಿಯು ನನಗೆ

ಗರ್ಭಪಾತ ಆಗಲು ಕಷಾಯಿಯನ್ನು ನೀಡಿದ್ದು ಆ ಕಾರಣ ನನಗೆ ಗರ್ಭಪಾತ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗರ್ಭಪಾತ ಮಾಡಿಸಿದಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ನಾನು ದೂರನ್ನು ನೀಡಿಲ್ಲ ಕಾರಣ ನನ್ನ ಗಂಡ ನನಗೆ ವಿಚ್ಛೇದನೆ ನೀಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ. ನಾನು ಹೇಳುವಂತಹ ಗರ್ಭಪಾತ ಘಟನೆ ನಡೆಯದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ತಾಯಿ ಮತ್ತು ಅವರ ಸಹೋದರಿಯ ವಿರುದ್ಧ ಕಾರವಾರ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆಯ ಕಿರುಕುಳ ನೀಡಿದ್ದಾರೆ ಎಂದು ದೂರನ್ನು ದಾಖಲಿಸಿದ್ದೇನೆ. ಸದರಿ ಪ್ರಕರಣದ ಸಿಸಿ ನಂಬರ್ 590/2022 ಆಗಿದೆ. ಸದರಿ ಸಿಸಿ ನಂಬರ್ 590/2022 ರಲ್ಲಿ ಆರೋಪಿತರು ನಿರ್ದೋಷಿ ಎಂದು ದಿ.11.11.2024 ರಂದು ಆದೇಶ ಆಗಿದೆ ಎಂದರೆ ಸದರಿ ಪ್ರಕರಣವು ಈಗಲು ಚಾಲ್ತಿಯಲ್ಲಿ ಇದೆ ಎಂದು ಉತ್ತರಿಸುತ್ತಾರೆ. ಎದುರುದಾರರು ನನ್ನ ವಿರುದ್ಧ ವಿಚ್ಛೇಧನವನ್ನು ಕೇಳಿ ಮೂಲ ದಾವೆ ನಂಬರ್ 104/2021 ಯನ್ನು ದಾಖಲಿದ್ದಾರೆ ಎಂದರೆ ಸರಿ.

ಮುಂದಿನ ಪಾಟೀಸವಾಲು ಮಾಡಲು ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**